


# ಮಧುಮೇಹವೂ ಹಲ್ಲಿನ ಆರೋಗ್ಯವೂ




**ಮಧುಮೇಹ ಇರುವವರಿಗೆ ಹಲ್ಲಿನ ಚಿಕಿತ್ಸೆ ನೀಡಬೇಕಾದರೆ ಸಕ್ಕರೆ ಕಾಯಿಲೆ ನಿಯಂತ್ರಣದಲ್ಲಿರಲೇಬೇಕು. ವಸಡಿನ ತೊಂದರೆ, ಬಾಯಿ ವಾಸನೆ, ಹಲ್ಲು ಅಲುಗಾಡುವುದು...ಇವೇ ಮೊದಲಾದ ದಂತ ಸಂಬಂಧಿ ಸಮಸ್ಯೆಗಳು ಮಧುಮೇಹದೊಂದಿಗೆ ಸಂಬಂಧ ಹೊಂದಿರುವುದಿಂದ ಮುನ್ನೆಚ್ಚರಿಕೆ ವಹಿಸುವುದು ಅಗತ್ಯ.**

**■ ಡಾ. ಮುರಲೀ ಮೋಹನ್ ಚೂಂತಾರು**

ಮಂಗಳೂರಿನ ಟೀನಾ ಹತ್ತನೆ ತರಗತಿ ವಿದ್ಯಾರ್ಥಿನಿ. ಕೆಲ ಆರೋಗ್ಯ ಸಮಸ್ಯೆಯಿಂದ ಟೀನಾ ಬಳಲುತ್ತಿದ್ದರೂ ಓದಲು ಸದಾ ಮುಂದು. ಜಾಣಹಲ್ಲಿನಲ್ಲಿ ಹುಳುಕು (ಕ್ಯಾವಿಟಿ) ಇದೆ ಎಂದು ನಮ್ಮ ದಂತ ಚಿಕಿತ್ಸಾಲಯಕ್ಕೆ ಬಂದಿದ್ದಳು. ಈಕೆಯನ್ನು ತಪಾಸಣೆ ಮಾಡುವ ಮುನ್ನ ಆರೋಗ್ಯದ ಇತರ ಸಮಸ್ಯೆ ಬಗ್ಗೆ ವಿಚಾರಿಸಿದಾಗ ಟೀನಾ ಮಧುಮೇಹದಿಂದ ಬಳಲುತ್ತಿರುವುದು ಗೊತ್ತಾಯಿತು. ಹಲ್ಲನ್ನು ಪರೀಕ್ಷಿಸಿದಾಗ ಇದಕ್ಕೆ ರೂಟ್ ಕೆನಾಲ್ ಮಾಡುವುದೊಂದೇ ದಾರಿ ಎಂಬ ತೀರ್ಮಾನಕ್ಕೆ ಬರಬೇಕಾಯಿತು. ಮೊದಲು ಮಧುಮೇಹ ನಿಯಂತ್ರಣದಲ್ಲಿ ಇದೆಯೇ ಎಂಬುದನ್ನು ಖಾತ್ರಿಪಡಿಸಿದ ನಂತರವೇ ಟೀನಾಗೆ ರೂಟ್‌ಕೆನಾಲ್ ಚಿಕಿತ್ಸೆ ನೀಡಲು ಮುಂದಾದೆ.

ಮಧುಮೇಹ ಇರುವವರಿಗೆ ದಂತ ಚಿಕಿತ್ಸೆ ನೀಡುವುದು ಒಂದು ರೀತಿಯ ಸವಾಲು. ಅದರಲ್ಲೂ ಸರ್ಜರಿ, ರೂಟ್‌ಕೆನಾಲ್, ಹುಳುಕು ಹಲ್ಲು ಕೀಳುವುದು ಮುಂತಾದ ಚುಚ್ಚುಮದ್ದು ಬೇಡುವ ಚಿಕಿತ್ಸೆ ನೀಡಬೇಕೆಂದರೆ ಸಕ್ಕರೆಕಾಯಿಲೆ ನಿಯಂತ್ರಣದಲ್ಲಿ ಇರಲೇಬೇಕು. ನಮ್ಮ ಬಾಯಿ ಎನ್ನುವುದು ಬ್ಯಾಕ್ಟೀರಿಯಾಗಳ ಗುಂಡಿ. ಲಕ್ಷಾಂತರ ಬ್ಯಾಕ್ಟೀರಿಯಾಗಳು ನಮ್ಮ ಬಾಯಿಯೊಳಗೆ ಮನೆ ಮಾಡಿಕೊಂಡು ನಿರುಪದ್ರವಿಯಾಗಿ ಬಾಳಿಕೊಂಡಿರುತ್ತದೆ. ದೇಹದ ರಕ್ಷಣಾ ವ್ಯವಸ್ಥೆ ಕುಸಿದು ಹೋದಾಗ ನಿರುಪದ್ರವಿ ರೋಗಾಣುಗಳು ತಮ್ಮ ನೈಜ ಬುದ್ಧಿಯನ್ನು ತೋರಿಸಿಕೊಂಡು ವಸಡಿನ ತೊಂದರೆಗಳಿಗೆ ಕಾರಣವಾಗುತ್ತದೆ. ಸಾಮಾನ್ಯವಾಗಿ ಮಧುಮೇಹಿ ರೋಗಿಗಳಲ್ಲಿ ನ್ಯೂಟ್ರೋಫಿಲ್ ಎಂಬ ಬಿಳಿರಕ್ತಕಣ ಸರಿಯಾಗಿ ಕಾರ್ಯನಿರ್ವಹಿಸುವುದಿಲ್ಲ. ಅದರ ರಚನೆಯಲ್ಲಿ ವ್ಯತ್ಯಾಸವಿರುತ್ತದೆ. ಈ ಕಾರಣದಿಂದಲೇ ಮಧುಮೇಹಿಗಳಲ್ಲಿ ಗಾಯ ಒಣಗಲು ಬಹಳ ಸಮಯ ಹಿಡಿಯುತ್ತದೆ. ಈ ಕಾರಣದಿಂದಾಗಿ ದಂತ ಸಂಬಂಧಿ ರೋಗಗಳು ಹೆಚ್ಚು ಕಂಡುಬರುತ್ತದೆ.

## ವಸಡಿನ ತೊಂದರೆ

ಮಧುಮೇಹಿಗಳ ವಸಡಿನಲ್ಲಿ ಪದೇ ಪದೇ ಸೋಂಕು ಉಂಟಾಗಿ, ಕೀವು ಉಂಟಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ. ಪಯೋರಿಯ ಎಂಬ ವಸಡಿನ ರೋಗ ಸುಮಾರು ಶೇಕಡ 80ರಷ್ಟು ಮಧುಮೇಹಿಗಳಲ್ಲಿ ಕಂಡುಬರುತ್ತದೆ.

## ಬಾಯಿ ವಾಸನೆ

ಮಧುಮೇಹ ಇರುವ ಕೆಲವರು ಬಹಳ ಅಸಹ್ಯವಾದ ಬಾಯಿ ವಾಸನೆಯಿಂದ ಬಳಲುತ್ತಾರೆ. ಬಾಯಿಯಲ್ಲಿನ ಬ್ಯಾಕ್ಟೀರಿಯಾಗಳ ಸಂಖ್ಯೆ ವೃದ್ಧಿಸಿಕೊಂಡು ವಸಡಿನ ನಡುವೆ ಕೀವು ತುಂಬಿಕೊಂಡು ಬಾಯಿಯಿಂದ ಅಸಹನೀಯವಾದ ವಾಸನೆ ಬರುತ್ತಿರುತ್ತದೆ. ಇದು ಅನಿಯಂತ್ರಿತ ಸಕ್ಕರೆಕಾಯಿಲೆಯಿಂದ ಉಂಟಾಗುವ ದಂತ ದೋಷ.

## ಗಾಯ ಒಣಗುವುದು ನಿಧಾನ

ರಕ್ತದಲ್ಲಿನ ಗ್ಲೂಕೋಸ್ ಪ್ರಮಾಣ ಜಾಸ್ತಿಯಾಗಿ, ಬ್ಯಾಕ್ಟೀರಿಯಾಗಳ ಸಂಖ್ಯೆ ವೃದ್ಧಿಸಿದಾಗ ಒಂದು ವಾರದಲ್ಲಿ ಒಣಗಬೇಕಾದ ಗಾಯ ನಾಲ್ಕೈದು ವಾರಗಳಾದರೂ ಒಣಗುವುದೇ ಇಲ್ಲ. ಹಲ್ಲು ಕೀಳುವಾಗ ಮಧುಮೇಹ ಇರುವವರ